ಯಾವ ರೀತಿಯಲ್ಲಿ ಹಾಕಿಕೊಳ್ಳುತ್ತೇವೆ, ಎಷ್ಟು ಪ್ರಮಾಣದಲ್ಲಿ ಹಾಕಿಕೊಳ್ಳುತ್ತೇವೆ ಎನ್ನುವುದನ್ನು ನಾನು ಈಗಲೆ ಹೇಳಲಾರೆ. It has acquired a very big dimension, according to me. ಆದ್ದರಿಂದ ವಿವರಗಳಿಗೆ ಹೋಗದೆ ಈ ವಿಚಾರದಲ್ಲಿ ಗಮನ ಕೊಟ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಅದನ್ನು ಹಾಗೆ ಬಿಟ್ಟರೆ ಆಗುವುದಿಲ್ಲ. ಇನ್ನು ಪೈಟಿನ್‌ಷನ್ ಬಳಕೆದಾರರ ಬಗ್ಗೆ ಹೇಳುವುದಾದರೆ, ಅವರಿಗೆ ಕೊಡುತ್ತಿರುವ ವಿದ್ಯುತ್ ಸರಬರಾಜಿನಲ್ಲಿ ಕಡಿತ ಮಾಡುವ ಬಗ್ಗೆ ತಾವು ಸಲಹೆ ಮಾಡಿದ್ದೀರಿ. ಈಗ ವಿದ್ಯುತ್ ಕಟ್ ಅನ್ನು ಅನಿವಾರ್ಯವಾಗಿ ಎಲ್ಲಾ ಕಡೆ ನಾವು ಅಪ್ಲೈ ಮಾಡುತ್ತಿದ್ದೇವೆ. ಇವತ್ತು ರೈತರಿಗೆ ವಿದ್ಯುತ್ ಕಟ್ ಮಾಡಿದರೆ ಅವರು ಬೆಳೆಯುವಂತಹ ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ನಮಗೆ ಪೆಟ್ಟು ಬೀಳುತ್ತದೆ. ಈ ಕಡೆ ಇಂಡಸ್ಟ್ರಿಗಳಿಗೆ ವಿದ್ಯುತ್ ಕಟ್ ಮಾಡಿದರೆ ನಮಗೆ ಪೆಟ್ಟು ಬೀಳುತ್ತದೆ. ಏನೇ ಆದರೂ ವಿದ್ಯುತ್ ಕಟ್ ಮಾಡತಕ್ಕಂಥಾದ್ದು ಅನಿವಾರ್ಯ. ಲೋಡ್ ಜಾಸ್ತಿಯಾದರೆ ಒಂದು ಕಡೆ ಕಟ್ ಮಾಡುವುದು ಮತ್ತೊಂದು ಕಡೆ ಪವರ್ ಕಡಿಮೆ ಇದೆ ಎಂಬ ಕಾರಣದಿಂದ ವಿದ್ಯುತ್‌ಕಟ್ ಮಾಡಬೇಕಾಗುತ್ತದೆ. ತಮ್ಮ ಸಲಹೆಗಳನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಎಷ್ಟು ಕಟ್ ಮಾಡುತ್ತೇವೆ ಎನ್ನುವುದನ್ನು ಈಗಲೆ ನಾನು ಹೇಳಲಾರೆ. ಇಷ್ಟೇ ನನ್ನ ಉತ್ತರ.

ಪ್ರೊ ಎಂ.ಡಿ. ನಂಜುಂಡಸ್ವಾಮಿ: ಎಷ್ಟು ವಿದ್ಯುತ್ ಕಟ್ ಮಾಡಬೇಕೆನ್ನುವುದನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿ ಅದು ಬೇರೆ ವಿಚಾರ. ಆದರೆ ಒಂದು ವಿಚಾರವನ್ನು ತಾವು ಮನಸ್ಸಿನಲ್ಲಿಟ್ಟು ಕೊಳ್ಳಬೇಕು. ಶೇಕಡ 75 ಭಾಗ ನಮ್ಮ ತಾಯಂದಿರಿಗೆ ನೇರವಾಗಿ ಸಂಬಂಧಪಟ್ಟ ಸಮಸ್ಯೆ. ಅವರ ದಿನಚರಿಯಲ್ಲಿ ಏನು ತೊಂದರೆಗಳು ಆಗುತ್ತಿವೆ ಅದನ್ನು ತಪ್ಪಿಸುವುದನ್ನು ತಮ್ಮ ಗಮನದಲ್ಲಿಟ್ಟುಕೊಂಡರೆ ಸಾಕು.

ಶ್ರೀ ಎಸ್. ಬಂಗಾರಪ್ಪ: ಮಿನಿವಾಟರ್ ಸಪ್ಲೈ ಸ್ಕೀಮ್‌ನಲ್ಲಿ ವಿದ್ಯುತ್ ಕಡಿತ ಮಾಡಿದರೆ 6 ಗಂಟೆಯಿಂದ 12 ಗಂಟೆಯವರೆಗೆ ತೊಂದರೆಯಾಗುತ್ತದೆ. ಆ ಸಮಯದಲ್ಲಿ ಅವರಿಗೆ ನೀರು ಸಿಗದೆ 12 ಗಂಟೆ ಆದ ಮೇಲೆ ಅವರ ದಿನಚರಿ ಪ್ರಾರಂಭವಾಗುತ್ತದೆ. ಇದು ಅವರಿಗೆ ಸಮಸ್ಯೆ ಆಗಿದೆ. ಇದನ್ನು ಸಹ ನಾವು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಕೂಡ ಹಾಕಿಕೊಳ್ಳಬೇಕಾಗುತ್ತದೆ.

ಮುಂಬೈ ಕರ್ನಾಟಕ ಪ್ರದೇಶದ ಅಭಿವೃದ್ಧಿ ಬಗ್ಗೆ

277 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಸರ್ಕಾರ ನಿರ್ಲಕ್ಷಣೆ ತೋರಿಸುತ್ತಿರುವ ಸಂಗತಿ ನಿಜವೇ?

ಆ) ಸರ್ಕಾರದವರು ಹೈದರಾಬಾದ್ ಮಂಡಳಿ ಅಭಿವೃದ್ಧಿ ನೇಮಿಸಿ ಅಭಿವೃದ್ಧಿ ಮಾಡುತ್ತಿರುವಂತೆ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ನೇಮಿಸಿ, ಮುಂಬೈ ಕರ್ನಾಟಕ ಪ್ರದೇಶ ಅಭಿವೃದ್ಧಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ನಿಜವಲ್ಲ

ಆ) ಇಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ.

ಶ್ರೀ ಎಸ್.ಎಚ್. ಕೌಜಲಗಿ: ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ "ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಸರ್ಕಾರ ನಿರ್ಲಕ್ಷಣೆ ತೋರಿಸುತ್ತಿರುವ ಸಂಗತಿ ನಿಜವೇ" ಎಂದು ಕೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರದಲ್ಲಿ ನಿಜವಲ್ಲವೆಂದು ಹೇಳಿದ್ದಾರೆ.

ನಿಜವಾಗಿಯೂ ನಾನು ಇವತ್ತು ಬಹಳ ವಿಷಾದದಿಂದ ಹೇಳುತ್ತೇನೆ. ಕರ್ನಾಟಕ ರಾಜ್ಯ ಎಂದರೆ ಬೆಂಗಳೂರು ಮತ್ತು ಮೈಸೂರು-ಎರಡಕ್ಕೆ ಮಾತ್ರ ಸೀಮಿತವಾಗಿದೆ. ಉಳಿದ ಭಾಗಗಳು ಮಾತ್ರ ಯಾವುದೇ ರೀತಿಯಿಂದ ಸೀಮಿತವಲ್ಲ ಎಂದು ಹೇಳಬಹುದು. ಇವತ್ತಿನದಿವಸ ಉತ್ತರ ಕರ್ನಾಟಕದ ಬಗ್ಗೆ ನಾನು ಹೇಳಿಲ್ಲ ಶ್ರೀಮಾನ್ ಬಿ. ಶಂಕರಾನಂದ್‌ರವರು ದಿನಾಂಕ 9-2-91 ರಂದು ಈ ರೀತಿ ಹೇಳಿದ್ದಾರೆ. ಅದೇನೆಂದರೆ ಪುನರ್ಘಟನೆ ಆದಮೇಲೆ ಯಾವ ರಾಜಕೀಯ ಪಕ್ಷಗಳು ಉತ್ತರ ಕರ್ನಾಟಕದ ಬಗ್ಗೆ ಯಾವುದೆ ಆಸಕ್ತಿಯನ್ನು ತೋರಿಸಿಲ್ಲ ಹಾಗೂ ಅದು ಅಭಿವೃದ್ಧಿ ಆಗುತ್ತಿಲ್ಲ ಎಂದು ಹೇಳಿದ್ದಾರೆ. ಅದನ್ನು ಪುಷ್ಟೀಕರಿಸಿ ನಾನು ಒಂದೆರಡು ಮಾತುಗಳನ್ನು ಕೇಳುತ್ತೇನೆ.

ಮೊದಲನೆಯದಾಗಿ ಉತ್ತರ ಕರ್ನಾಟಕದ ಇರಿಗೇಶನ್ ಬಗ್ಗೆ ತಾವು ಮತ್ತು ತಮ್ಮ ಸರ್ಕಾರ ಹಾಗೂ ಹಿಂದಿನ ಸರ್ಕಾರಗಳು ನಿರ್ಲಕ್ಷಣೆ ಮಾಡಿಲ್ಲವೇ? ಆಮೇಲೆ ಮಲಪ್ರಭಾ ಪ್ರಾಜೆಕ್ಟ್ 1964ನೇ ಇಸವಿಯಲ್ಲಾದರೂ ಸಹ ಇದುವರೆವಿಗೂ ಮುಗಿದಿಲ್ಲ ಕಾರಣವೇನು? ಮತ್ತೆ ಯು.ಕೆ.ಪಿ. ಪ್ರಾಜೆಕ್ಟ್ ಪ್ರಾರಂಭವಾದರೂ ಸಹ ಅದಕ್ಕೆ ಫೈನಾನ್ಸ್ ಕೊಡದೆ ಇರುವುದರಿಂದ ಅದು ಮಂದಗತಿಯಲ್ಲಿ ನಡೆದಿದೆ. ಹಾಗೆಯೇ ಹಿಪ್ಪರಗಿ ಬ್ಯಾರೇಜನ್ನು ತೆಗೆದುಕೊಂಡರೆ ಅದೂ ಆಗಿಲ್ಲ. ಮಾದಾಯಿ ಪ್ರಾಜೆಕ್ಟ್ ತೆಗೆದುಕೊಂಡರೆ ಅದೂ ಆಗಿಲ್ಲ. ಮಾರ್ಕಂಡ್ ಇರಿಗೇಶನ್ ಪ್ರಾಜೆಕ್ಟ್ ಆಗಿಲ್ಲ.

ಬಳ್ಳಾರಿ ನಾಲಾ ಪ್ರಾಜೆಕ್ಟ್ ತೆಗೆದುಕೊಳ್ಳಿ, ಅದೂ ಆಗಿಲ್ಲ. ಮಾನ್ಯ ವಿಶ್ವನಾಥರೆಡ್ಡಿ ಮುದ್ನಾಳ್‌ರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗ ರಚನೆಯಾಗಿ ಅವರು ಒಂದು ರಿಪೋರ್ಟ್ ಕೊಟ್ಟಿದ್ದರು. ಆ ರಿಪೋರ್ಟ್ ಸಹಿತ ಇವತ್ತಿನವರೆಗೂ ಅನುಷ್ಠಾನ ಆಗಿಲ್ಲ. ಅಂದರೆ, ಉತ್ತರ ಕರ್ನಾಟಕದ ಭಾಗ ಇರಿಗೇಶನ್ ಡಿಪಾರ್ಟ್‌ಮೆಂಟಿನಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಎರಡನೆಯದಾಗಿ, ಎಜುಕೇಷನ್ ಬಗ್ಗೆ ಹೇಳುವುದಾದರೆ ಹಿಂದಿನ ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲಿ ಬೆಳಗಾಮ್‌ನಲ್ಲಿ ಟೆಕ್ನಿಕಲ್ ಎಜುಕೇಷನ್ ತೆಗೆಯುತ್ತೇವೆಂದು ಹೇಳಿದರು. ಇವತ್ತಿನ ದಿವಸ ತಾವು ರಾಜ್ಯಪಾಲರ ಭಾಷಣದಲ್ಲಿ ಯಾವುದೇ ವಿಷಯ ಹೇಳಿಲ್ಲ.

MR.SPEAKER: Question please. You are agruing the point. There are many occasions to argue. Now put your question.

SRI S.H. KOUJALAGI: I am putting the question.

ತಾವು ಇವತ್ತಿನ ದಿವಸ ಎಜುಕೇಷನ್ ಬಗ್ಗೆ ಉತ್ತರ ಕರ್ನಾಟಕವನ್ನು ನಿರ್ಲಕ್ಷ್ಯ ಮಾಡುತ್ತಿದ್ದೀರಿ. ಇಂಡಸ್ಟ್ರಿ ಸಲುವಾಗಿ ಕೊಟ್ಟಿರುವುದು ಬರೀ ಒಂದು ನಿರೋಧ್ ಫ್ಯಾಕ್ಟರಿ ಮತ್ತೆ ಪಬ್ಲಿಕ್ ಸರ್ವಿಸ್ ಕಮೀಷನ್ ತೆಗೆದುಕೊಂಡರೆ ಅಲ್ಲಿ ಮೆಂಬರ್ ಕಲ್ಲೂರ್‌ರವರು ಇದ್ದರು. ಅವರು ರಿಟೈರ್ ಆದನಂತರ ಮತ್ತೆ ಹೈದರಾಬಾದ್ ಕರ್ನಾಟಕದ ಪಾಟೀಲರನ್ನು ನೇಮಿಸಿದಿರಿ. ಅದ್ದರಿಂದ ಎಲ್ಲಾ ರೀತಿಯಿಂದ ಉತ್ತರ ಕರ್ನಾಟಕವನ್ನು ತಾವು ನಿರ್ಲಕ್ಷ್ಯ ಮಾಡುವುದಕ್ಕೆ ಹತ್ತಿದ್ದೀರೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕೌಜಲಗಿಯವರು ಬಹಳ ಸೀರಿಯಸ್ ಆಗಿ ಕೇಳುತ್ತಿದ್ದಾರೆ. ಅದಕ್ಕೆ ಅವರಿಗೆ ನಾವೂ ಸೀರಿಯಸ್ ಆಗಿ ಉತ್ತರ ಕೊಡೋಣ.

ಶ್ರೀ ಎಸ್.ಹೆಚ್. ಕೌಜಲಗಿ: ನಮ್ಮ ಕಡೆ ನಿರೋಧ್ ಫ್ಯಾಕ್ಟರಿ ಬಿಟ್ಟು ಮತ್ತೆ ಏನೂ ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ: ಹಾಗಾದರೆ ಅಲ್ಲಿ ಉಳಿದಿರತಕ್ಕಂಥ ಕಾರ್ಖಾನೆಗಳನ್ನು ತೆಗೆಸಿಬಿಡೋಣವೆ? ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರ ಅಭಿಪ್ರಾಯ ಅದು. ಇವತ್ತು ಅದು ಹಿಂದುಳಿದಿರತಕ್ಕಂಥ ಪ್ರದೇಶ. ಬಾಂಬೆ ಕರ್ನಾಟಕ ಭಾಗ ಮುಂದುವರಿದಿದೆ ಎನ್ನತಕ್ಕಂಥ ಮಾತನ್ನು ಯಾರು ಹೇಳಿಲ್ಲ.

ಇವತ್ತು ಯಾವುದೇ ಇದ್ದರೂ ಕೂಡ, ಕರ್ನಾಟಕ ರಾಜ್ಯವೇ ಪ್ರಗತಿಯಾಗಬೇಕು ಎನ್ನತಕ್ಕಂಥ ಮಾತನ್ನು ನಾವು ಎಲ್ಲಾ ಭಾಗಗಳನ್ನೊಳಗೊಂಡಂತೆ ಯಾವಾಗಲೂ ಮಾತನಾಡುತ್ತೇವೆ. We have now thought of constituting a Statutory Board like Hyderabad-Karnataka Development Board. ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದು ನಾವು ಮಾಡಿಕೊಂಡಿದ್ದೇವೆ. ಅದು ಅತಿಯಾಗಿ ಹಿಂದುಳಿದಿರತಕ್ಕಂಥ ಪ್ರದೇಶ ಎನ್ನತಕ್ಕಂಥ ಮಾತನ್ನು ನಾವೆಲ್ಲರೂ ಒಪ್ಪಿದ್ದೇವೆ. ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಬಗ್ಗೆ ನಾವು ಮಾತನಾಡಿದ್ದೇವೆ. ಅದರ ಬಗ್ಗೆ ಗಮನವನ್ನೂ ಕೂಡಾ ಕೊಟ್ಟಿದೇವೆ. ಅದು ಎಲ್ಲರಿಗೂ ಸಂತೋಷವಾಗಿದೆ. ಹಣ ಜಾಸ್ತಿ ಕೊಡಬೇಕು, ಅದು ಅಭಿವೃದ್ಧಿಯಾಗಬೇಕು ಎನ್ನತಕ್ಕಂಥ ವಿಚಾರವನ್ನು ನಾವು ಒಪ್ಪುತ್ತೇವೆ. ಅದೇ ರೀತಿಯಾಗಿ ಬೇರೆ ಕಡೆಯಲ್ಲೂ ಬರಬೇಕೆಂದು ಆಸಕ್ತಿ ಇಟ್ಟುಕೊಂಡೇ ನಾವು ಇವತ್ತು ಯಾವುದೇ ಪಕ್ಷ, ಯಾವುದೇ ಸರ್ಕಾರ ಇದ್ದರೂ ಕೂಡಾ ನಾವು ಗಮನವನ್ನು ಕೊಟ್ಟುಕೊಂಡು ಬಂದಿದ್ದೇವೆ. ಇವತ್ತು ಅಭಿವೃದ್ಧಿ ಎನ್ನತಕ್ಕಂಥ ಮಾತನ್ನು ಆಡಿದಾಗ ನಾವು ಹಲವಾರು ಮುಖವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಇರಿಗೇಷನ್, ಪವರ್ ಜನರೇಷನ್, ಕಮ್ಯುನಿಕೇಷನ್ ಇಂಡಸ್ಟ್ರಿಯಲ್ ಸೆಕ್ಟಾರ್ ಇರಬಹುದು. ಅಗ್ರಿಕಲ್ಚರ್ ಇರಬಹುದು employment oriented programme ಇರಬಹುದು. ಇವೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು.

ಇವತ್ತು ನಾನು ಏನಾದರೂ 4 ಉದಾಹರಣೆ ಕೊಟ್ಟರೆ, ಈ ಉದಾಹರಣೆಗಳು ಹೊಸವು ಏನಲ್ಲ. ಇದು ಬೆಳೆದುಬಿಟ್ಟಿದೆ ಎನ್ನತಕ್ಕಂಥ ಮಾತಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ, ಮಲಪ್ರಭಾ Major irrigation project along with our Krishna project ಇದೆ ಉದಾಹರಣೆ ನಾವು ಬಿಜಾಪುರಕ್ಕೆ ಸಂಬಂಧಪಟ್ಟಹಾಗೆ ಇಟ್ಟುಕೊಳ್ಳೋಣ. ಮಲಪ್ರಭಾ ತೆಗೆದುಕೊಂಡರೆ ಅಲ್ಲಿ ಇನ್ನೂ ಕೂಡ ಆಗತಕ್ಕಂಥ ಕೆಲಸ ಕಾರ್ಯಗಳು ಇವೆ. ನಾವು ಡ್ಯಾಮ್ ಕಟ್ಟಿದ್ದೇವೆ. ಇನ್ನೂ ಅನೇಕ ಕೆಲಸಗಳು ಆಗಬೇಕು. ಚಾನಲ್ ವಗೈರೆ ಆಗಲಿಲ್ಲ. ಮಾದಾಯಿ ಡೈವರ್ಷನ್ ಸ್ಕೀಮ್ ಆಗಬೇಕು, it is a multipurpose project also.

ನಾವು ಪವರ್‌ದು ಯೋಜನೆ ಮಾಡಿದ್ದೇವೆ. ಕುಡಿಯುವ ನೀರನ್ನು ಹುಬ್ಬಳ್ಳಿ-ಧಾರವಾಡಕ್ಕೆ ತರತಕ್ಕಂಥ ವಿಚಾರ ಅದರಲ್ಲಿ ಅಡಗಿದೆ. ಇದರ ಜೊತೆಗೆ ಇರಿಗೇಷನ್ ಕೂಡ ಅಡಗಿದೆ. ಈಗ ನಾವು ಮಾದಾಯಿ ಡೈವರ್ಷನ್ ಸ್ಕೀಮ್ ತೆಗೆದುಕೊಳ್ಳದಿದ್ದರೆ ನಿಜವಾಗಿಯೂ ಪ್ರಗತಿ ಕಾಣುವುದಕ್ಕಾಗುವುದಿಲ್ಲ, ಹಲವಾರು ಸಮಸ್ಯೆಗಳು ಉಳಿಯುತ್ತವೆ. ತಾವು ನಾಲ್ಕು ಜಿಲ್ಲೆಗಳಾದ ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಕಾರವಾರ, ಬಾಂಬೆ-ಕರ್ನಾಟಕದ ಬಗ್ಗೆ ಪ್ರಶ್ನೆ ಎತ್ತಿದ್ದೀರಿ. ಇವತ್ತು ಇವುಗಳ ಕೆಲಸಕಾರ್ಯಗಳಿಗೆ ನಾವು ಹಣವನ್ನು ಪ್ರೊವೈಡ್ ಮಾಡಬಹುದು. Now we are thinking of providing funds for Madai diversion Scheme. ಹಿಂದೆ ಹಣವನ್ನು ಕೊಟ್ಟಿಲ್ಲವೆಂದಲ್ಲ, ಹಿಂದೆಯೂ ಕೂಡಾ ಕೊಟ್ಟಿದ್ದಾರೆ. ಅದರೆ ಅದು ಸಾಕಾಗುವುದಿಲ್ಲ, ಕೆಲಸ ಕಾರ್ಯಗಳು ಮುಗಿಯಬೇಕು ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. This is number one.ಈಗ ನಾವು ಘಟಪ್ರಭಾ ತೆಗೆದುಕೊಳ್ಳೋಣ, Ghataprabha Right Bank Canal is still Pending.ತಮಗೆ ಗೊತ್ತಿದೆ, ಘಟಪ್ರಭಾ ರೈಟ್ ಬ್ಯಾಂಕ್ ಚಾನಲ್ ತೆಗೆದುಕೊಳ್ಳಬೇಕೆಂದು ರೈತರ ಒತ್ತಡ ಸಾಕಷ್ಟು ಪ್ರಮಾಣದಲ್ಲಿ ಇದೆ. ಈಗ ಅದನ್ನು ನಾವು ತೆಗೆದುಕೊಳ್ಳದಿದ್ದರೆ

ಆ ಕಡೆ ಭಾಗದ ರೈತರಿಗೆ ಉಪಯೋಗವಾಗುವುದಿಲ್ಲ. ಈಗ ಕೃಷ್ಣಾ ನದಿ ಹರಿಯುತ್ತಿದೆ. ಮಹಾರಾಷ್ಟ್ರದ ಕಡೆಯಿಂದ ಬಂದು ತಮ್ಮ ಬೆಳಗಾಂ ಜಿಲ್ಲೆಯಲ್ಲಿ ಹೋಗುತ್ತದೆ, ತಾವು ನೋಡಿದ್ದೀರಿ, ನಾವು ಕೂಡಾ ನೋಡಿದ್ದೇವೆ. I prefer lift irrigation scheme.

ಅನೇಕ ಜನ ನಮಗೆ ಲಿಫ್ಟ್ ಇರಿಗೇಷನ್ ಬೇಕು ಎಂದು ಕೇಳಿದ್ದಾರೆ.

ಏಕೆಂದರೆ ಮಹಾರಾಷ್ಟ್ರದಲ್ಲಿ ಅನೇಕ ಕಡೆ ಮಾಡಿ ಕೋ-ಆಪರೇಟೀವ್ ಸೆಕ್ಟರ್‌ನಲ್ಲಿ ಬೇಕಾದಷ್ಟು ಶುಗರ್ ಫ್ಯಾಕ್ಟರಿಗಳನ್ನು ಮಾಡಿಕೊಂಡಿದ್ದಾರೆ, ಮತ್ತೊಂದು ಮಾಡಿದ್ದಾರೆ. ಆದ್ದರಿಂದ ನಮ್ಮ ಸರ್ಕಾರ ಕೂಡ ವಿಚಾರ ಮಾಡಿ ಈ ಸಾರಿ ಹೆಚ್ಚಿನ ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕು ಎಂಬ ಉದ್ದೇಶ ಇವೆ. That is why, the Government has recommended to the Government of India for issue of licences to those who are coming specially under the Co-operative Sector.

ಅದನ್ನು ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಅದನ್ನು ಓಪನ್ನಾಗಿ ಕೂಡ ಹೇಳಿದ್ದೇವೆ, ಪತ್ರಿಕೆಯಲ್ಲಿ ಕೂಡ ಬಂದಿದೆ. ಮೊನ್ನೆ ಮೊನ್ನೆ ಅಥಣಿ ಕಡೆಗೆ ಹೋದಾಗಲೂ ಕೂಡ ಶುಗರ್ ಫ್ಯಾಕ್ಟರಿ ಮಾಡತಕ್ಕ ವಿಚಾರ ಬಂತು. ನಿಮ್ಮ ಖಾನಾಪುರದ ಕಡೆ ಮಹಾಲಕ್ಷ್ಮಿ ಕಡೆ ಮಾಡಬೇಕು ಎನ್ನತಕ್ಕದ್ದು ಇದೆ. ನೀವು ಪೊಟೆನ್ಷಿಯಲ್ ನೋಡಿ. ಇನ್ನೂ ಕೂಡ ಯಾರಾದರೂ ಬಂದರೆ ನಾವು ಸರ್ಕಾರದವರು ಇದರ ಬಗ್ಗೆ ಪರ್ಮಿಷನ್ ಕೊಡುವುದಕ್ಕೆ ರೆಡಿ ಇದ್ದೇವೆ. Let me be frank to you ನನ್ನ ಪ್ರಕಾರ ಇದು ಆ ಭಾಗದ ಅಭಿವೃದ್ಧಿ ಬಗ್ಗೆ ವಿಚಾರ ಮಾಡತಕ್ಕ ವಿಧಾನ. ಇದಲ್ಲದೆ ಹಿಪ್ಪರಗಿ ಬ್ಯಾರೇಜ್ ಬಹಳ ದಿವಸಗಳಿಂದ ಪೆಂಡಿಂಗ್ ಇರತಕ್ಕ ವಿಚಾರ. ಅದು ಇರಿಗೇಷನ್‌ಗೆ ಸಂಬಂಧಪಟ್ಟ ಹಾಗೆ ಇದೆ ಇವತ್ತು ತಾವು ಟೆಕ್ನಿಕಲ್ ಎಜುಕೇಷನ್ ಬಗ್ಗೆ ಮಾತನಾಡಿದ್ದೀರಿ. ನಿಜ ಹೇಳಬೇಕಾದರೆ, ತಮ್ಮ ಕಡೆ ಕಡಿಮೆ ಏನೂ ಇಲ್ಲ. ಉದಾಹರಣೆಗೆ ಹೇಳಬೇಕಾದರೆ, ಗವರ್ನಮೆಂಟ್‌ನಲ್ಲಿ ಇರಬಹುದು ಅಥವಾ ಪ್ರೈವೇಟ್‌ನಲ್ಲಿ ಇರಬಹುದು. ನಿಮ್ಮ ಬೆಳಗಾಂ ಅನ್ನು ತೆಗೆದುಕೊಂಡರೆ ಮೊದಲು ಯಾರೂ ಮಾಡದೇ ಇರತಕ್ಕ ಕಾಲದಲ್ಲೇ ಅಲ್ಲಿ ಟೆಕ್ನಿಕಲ್ ಎಜುಕೇಶನ್‌ಗಳು ಆಗಿವೆ. ನನಗೆ ಗೊತ್ತಿದೆ, ತಾವು ಡೈರೆಕ್ಟರ್ ಇದ್ದೀರಿ. ನನಗೆ ಬಹಳ ಸಂತೋಷ. ಅದು ಮೆಡಿಕಲ್ ಕಾಲೇಜು ಇರಬಹುದು, ಇಂಜಿನಿಯರಿಂಗ್ ಕಾಲೇಜುಗಳು ಇರಬಹುದು. ಹುಬ್ಬಳ್ಳಿ-ಧಾರವಾಡ ಸೈಡ್‌ನಲ್ಲಿ ಇರಬಹುದು, ಮತ್ತೊಂದು ಕಡೆ ಇರಬಹುದು. ಅದು ಆಗಲಿ, ಇನ್ನೂ ಕೂಡ ನಮಗೆ ಕಾಲೇಜು ಬೇಕು, ಅದರ ಅವಶ್ಯಕತೆ ಇದೆ ಎಂದು ಕಂಡು ಬಂದಾಗ ಸರ್ಕಾರ ಪರಿಶೀಲನೆ ಮಾಡುತ್ತದೆ. ಕೊಡಬಹುದು. ನಿಜ ಹೇಳಬೇಕೆಂದರೆ, ನನಗೆ ಗೊತ್ತಿರುವ ಹಾಗೆ ನಿಮ್ಮ ಕಾರವಾರ ಜಿಲ್ಲೆ ಬಹಳ ಹಿಂದುಳಿದಿರತಕ್ಕ ಜಿಲ್ಲೆ. ಬಿಜಾಪುರ ಕೂಡ ಹಿಂದುಳಿದತಕ್ಕ ಜಿಲ್ಲೆ ಮೊನ್ನೆ ಮೊನ್ನೆ ಬಿಜಾಪುರಕ್ಕೆ ಒಂದು ಅಗ್ರಿಕಲ್ಚರಲ್ ಕಾಲೇಜನ್ನು ಕೊಟ್ಟಿದ್ದೇವೆ. ಅದೊಂದರಿಂದಲೆ ಅದು ಬೆಳೆದು ಹೋಯಿತು ಎನ್ನತಕ್ಕ ಮಾತನ್ನು ನಾನು ಆಡುವುದಿಲ್ಲ. ಅದು ನನ್ನ ವಿಚಾರ ಅಲ್ಲ. ಇನ್ನೂ ಕೂಡ ಏನು ಆಗಬೇಕು ಎಂದು ತಾವು ಸಲಹೆಗಳನ್ನು ಕೊಟ್ಟರೆ ನಾವು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು: ಜಿ. ರಾಜುಗೌಡ..

ಶ್ರೀ ಡಿ. ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಸಲಹೆ ಇದೆ. ಒಂದು ಪ್ರಶ್ನೆಗೆ ಉತ್ತರ ಹೇಳುವಾಗ ಎರಡಕ್ಕಿಂತ ಹೆಚ್ಚು ಉಪ ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಡಬೇಡಿ.